ಅಂಗನವಾಡಿ ಕೇಂದ್ರಗಳು

106(1464); ಶ್ರೀ ತಮ್ಮಣ್ಣ ಡಿ.ಸಿ (ಮದ್ದೂರು)

ಅ) ಮಂಡ್ಯ ಜಿಲ್ಲೆ ಮದ್ದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಸ್ವಂತ ಸುಸಜ್ಜಿತವಾದ ಕಟ್ಟಡಗಳಿರುವ ಕೇಂದ್ರಗಳ ಸಂಖ್ಯೆ ಎಷ್ಟು; ಖಾಸಗೀ ಕಟ್ಟಡ/ ಶಾಲಾ ಕಟ್ಟಡ/ ಸಮುದಾಯ ಭವನ/ ಸೊಸೈಟಿ ಗೋಡೌನ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು;

ಇ) ಖಾಸಗೀ ಮತ್ತು ಇತರೆ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳಿಗೆ ಕಟ್ಟಡಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಎಷ್ಟು ವರ್ಷಗಳಲ್ಲಿ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು;

ಈ) ಸ್ವಂತ ಕಟ್ಟಡ ಕಟ್ಟಲು ಪ್ರತಿ ಅಂಗನವಾಡಿ ಕೇಂದ್ರಕ್ಕೆ ಸರ್ಕಾರ ಒದಗಿಸುತ್ತಿರುವ ಅನುದಾನ ಎಷ್ಟು

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಮದ್ದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ–318

ಆ) ಅಂಗನವಾಡಿ ಕೇಂದ್ರಗಳು ಕಟ್ಟಡಗಳ ವಿವರ ಕೆಳಕಂಡಂತಿದೆ.

1	ಸ್ವಂತ ಕಟ್ಟಡ	192
2	ಖಾಸಗಿ ಕಟ್ಟಡ	68
3	ಶಾಲಾಕಟ್ಟಡ	47
4	ಸಮುದಾಯಭವನ	10

5	ಸೊಸೈಟಿ/ಗೋಡೌನ್	01
	ಒಟ್ಟು	318

ಇ) ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳನ್ನು ಸರ್ಕಾರದ ವಿವಿಧ ಯೋಜನೆಗಳಾದ ರಾಜ್ಯ ವಲಯದ ನಬಾರ್ಡ್‌ನ ಆರ್.ಐ.ಡಿ.ಎಫ್. ವಿಶೇಷ ಅಭಿವೃದ್ಧಿ ಯೋಜನೆ, ಹಾಗೂ ಸುವರ್ಣ ಗ್ರಾಮ ಯೋಜನೆ, ಗ್ರಾಮಸ್ವರಾಜ್ ಯೋಜನೆ, ತಾಲ್ಲೂಕುಪಂಚಾಯತ್ ಅನುದಾನ, ಇನ್ನಿತರ ಯೋಜನೆಗಳಡಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ನಿವೇಶನ ಲಭ್ಯತೆ ಮತ್ತು ಅನುದಾನದ ಲಭ್ಯತೆ ಮೇರೆಗೆ ಹಂತಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುವುದು.

ಈ) 2013–14ನೇ ಸಾಲಿನಿಂದ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಘಟಕ ವೆಚ್ಚ ₹ 11.95 ಲಕ್ಷಗಳನ್ನು ಒದಗಿಸಲಾಗುತ್ತಿದೆ.

1. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು:– ಈಗ ಪ್ರಶ್ನೋತ್ತರ. ಶ್ರೀಮಾನ್ ತಮ್ಮಣ್ಣ .ಡಿ.ಸಿ.ರವರೆ ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ತಮ್ಮಣ್ಣ .ಡಿ.ಸಿ. (ಮದ್ದೂರು):– ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಶ್ನೆ ಸಂಖ್ಯೆ1464ನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು

ಸಂಸ್ಕೃತಿ ಇಲಾಖೆ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ತಮ್ಮಣ್ಣ .ಡಿ.ಸಿ.:– ಮಾನ್ಯ ಸಭಾಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಮದ್ದೂರು ಕ್ಷೇತ್ರದಲ್ಲಿ 318 ಅಂಗನವಾಡಿ ಕೇಂದ್ರಗಳಿವೆ. ಈ ಪೈಕಿ 192 ಅಂಗನವಾಡಿ ಕೇಂದ್ರಗಳಿಗೆ ಮಾತ್ರ ಸ್ವಂತ ಕಟ್ಟಡವಿದೆ. ಇನ್ನೂ 126 ಅಂಗನವಾಡಿ ಕೇಂದ್ರಗಳಿಗೆ ಕಟ್ಟಡವನ್ನು ಒದಗಿಸುವುದಕ್ಕೆ ಆಗಿಲ್ಲ. ಹಾಗೂ ಈಗಿರುವಂಥ ಕಟ್ಟಡಗಳ ವ್ಯವಸ್ಥೆಯನ್ನು ನೋಡಿದರೆ ಆ ಕಟ್ಟಡಗಳಲ್ಲಿ ಮಕ್ಕಳ ಅಭಿವೃದ್ಧಿ ಆಗುತ್ತದೆಯೇ ಅಥವಾ ಇಲ್ಲವೇ ಎನ್ನುವ ಅನುಮಾನ ನಮಗೆ ಬರುತ್ತದೆ. ಹಿಂದೆ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಅನುದಾನದಲ್ಲಿ ಕಟ್ಟಿರುವಂಥ ಅಂಗನವಾಡಿ ಕಟ್ಟಡಗಳು ಪ್ರಾಣಿಗಳ ಗೂಡುಗಳಿದ್ದಂತೆ ಇವೆ. ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲ.

ಅಧ್ಯಕ್ಷರು:– ಏನು ಮಾಡಬೇಕೆಂದು ನೀವು ಪ್ರಶ್ನೆ ಕೇಳಿ. ಚರ್ಚೆ ಮಾಡಬೇಡಿ.

ಶ್ರೀ ತಮ್ಮಣ್ಣ .ಡಿ.ಸಿ.:– ಆದ್ದರಿಂದ ಈ ಕಟ್ಟಡಗಳ ವ್ಯವಸ್ಥೆಗೆ ಸರ್ಕಾರ ಏನು ಮಾಡುತ್ತದೆ ? ಎನ್ನುವುದನ್ನು ದಯಮಾಡಿ ಸಚಿವರು ತಿಳಿಸಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀಮತಿ ಉಮಾಶ್ರೀ:– ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಉತ್ತರವನ್ನು ಒದಗಿಸಿ ಕೊಡಲಾಗಿದೆ. ಖಾಸಗಿ ಮತ್ತು ಇತರೇ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳಿಗೆ ಕಟ್ಟಡಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಎಂದು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಾವು ಆರ್.ಐ.ಡಿ.ಎಫ್. ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಾಗೂ ಸುವರ್ಣ ಗ್ರಾಮ ಯೋಜನೆ, ಗ್ರಾಮಸ್ವರಾಜ್ ಯೋಜನೆ, ತಾಲ್ಲೂಕು ಪಂಚಾಯತ್ ಅನುದಾನದಡಿಯಲ್ಲಿ ಎಲ್ಲಾ ಹಣವನ್ನು ಒಗ್ಗೂಡಿಸಿ ನಾವು ನಿವೇಶನ ಲಭ್ಯತೆ ಆಧಾರದ ಮೇಲೆ ಕಟ್ಟಡವನ್ನು ಹಂತ ಹಂತವಾಗಿ ಕಟ್ಟುತ್ತಿದ್ದೇವೆಂದು ಉತ್ತರವನ್ನು ನೀಡಿದ್ದೇವೆ.

ಇನ್ನು, ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಕಟ್ಟಲು ಎಷ್ಟು ಹಣವನ್ನು ಒದಗಿಸುತ್ತಿದ್ದೀರೆಂದು ಕೇಳಿದ್ದಾರೆ. ಒಂದು ಕಟ್ಟಡಕ್ಕೆ ₹ 11.95 ಲಕ್ಷಗಳನ್ನು ಒದಗಿಸಲಾಗುತ್ತಿದೆ.

ಅಧ್ಯಕ್ಷರು:– ಉತ್ತರದಲ್ಲಿ ಹೇಳಿದ್ದೀರಿ.

ಶ್ರೀ ತಮ್ಮಣ್ಣ .ಡಿ.ಸಿ.:– ಮಾನ್ಯ ಅಧ್ಯಕ್ಷರೆ, ಹಾಲಿ ಇರುವಂಥ ಕಟ್ಟಡಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈಗ ಇರುವಂಥ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಶೌಚಾಲಯ ವ್ಯವಸ್ಥೆ ಇಲ್ಲ.

ಅಧ್ಯಕ್ಷರು:– ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲಾಗುವುದೆಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆ.

ಶ್ರೀ ತಮ್ಮಣ್ಣ ಡಿ.ಸಿ.:– ಮಾನ್ಯ ಅಧ್ಯಕ್ಷರೆ, ಅಂಗನವಾಡಿಯಲ್ಲಿರುವಂಥ ಸಣ್ಣ ಮಕ್ಕಳು ಆ ಶೌಚಾಲಯಕ್ಕೆ ಹೋದರೆ ಬರಬಾರದಂಥ ಕಾಯಿಲೆ ಬರುತ್ತದೆ. ಆಗ toilet ಗೆ ಹೋಗುವುದಕ್ಕೆ ಆಗುವುದಿಲ್ಲ. ಅಂಗನವಾಡಿ ಕೇಂದ್ರಗಳಲ್ಲಿ flooring ಸಹ ಇಲ್ಲ, ಎಲ್ಲವೂ ಒಡೆದು ಹೋಗಿದೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಶ್ರೀ ತಮ್ಮಣ್ಣನವರೇ, ಯಾವ ಅಂಗನವಾಡಿಯಲ್ಲಿ ಈ ಪರಿಸ್ಥಿತಿಯಿದೆ ಎನ್ನುವುದನ್ನು specific ಆಗಿ ಹೇಳಿ. ಆಗ ಅವರು attention ಕೊಡುತ್ತಾರೆ.

ಶ್ರೀ ತಮ್ಮಣ್ಣ .ಡಿ.ಸಿ.:– ಮಾನ್ಯ ಅಧ್ಯಕ್ಷರೇ, specific ಆಗಿ ಎಂದರೆ ಸಾಮಾನ್ಯವಾಗಿ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲೂ ಅದೇ ರೀತಿಯಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ 90% ಭಾಗ ಅದೇ ರೀತಿಯಿದೆ. ಇದು ಸತ್ಯವಾದ ಮಾತು.

ಶ್ರೀಮತಿ ಉಮಾಶ್ರೀ:– ಈಗಾಗಲೇ ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಸಾಕಷ್ಟು ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯ ನಿರ್ಮಾಣ ಮಾಡುವುದರಲ್ಲಿ ಲಕ್ಷ್ಯ ಕೊಟ್ಟಿದ್ದಾರೆ. ಸಾಕಷ್ಟು ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕೊಂಡಿದ್ದಾರೆ. ಈಗಾಗಲೇ ಅಂಗನವಾಡಿಗಳಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆಯನ್ನು ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆ ಕಾರ್ಯಕ್ರಮಗಳು ಆಗುತ್ತಿವೆ. ಅವೆಲ್ಲವನ್ನೂ ಕೂಡ ಪೂರ್ಣ ಮಾಡಿಕೊಡುತ್ತೇವೆನ್ನುವ ಭರವಸೆಯನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು, ದುರಸ್ತಿ ಬಗ್ಗೆ ಹೇಳಿದ್ದಾರೆ. ಈಗಾಗಲೇ ದುರಸ್ತಿಗಾಗಿ ಸಾಕಷ್ಟು ಹಣವನ್ನು ಜಿಲ್ಲೆಗಳಿಗೆ ನಾವು ಬಿಡುಗಡೆ ಮಾಡಿದ್ದೇವೆ. Particular ಆಗಿ ತಾವು ಯಾವುದಾದರೂ ಇದ್ದರೆ ಹೇಳಿ, ಅದನ್ನೂ ಸಹ ನಾವು ಮಾಡಿಸಿಕೊಡುವಂಥ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ತಮ್ಮಣ್ಣನವರೆ ಸಚಿವರು ಉತ್ತರ ನೀಡುತ್ತಿದ್ದಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀಮತಿ ಉಮಾಶ್ರೀ:– ಮಾನ್ಯ ಅಧ್ಯಕ್ಷರೆ, ದುರಸ್ತಿಗೆ ಸಂಬಂಧಪಟ್ಟಂತೆ ಸಾಕಷ್ಟು ಹಣವನ್ನು ಸಹ ಪ್ರತಿಯೊಂದು ಜಿಲ್ಲೆಗೂ ನಾವು ಕೊಡಮಾಡಿದ್ದೇವೆ. ಅವರು Particular ಆಗಿ ನನಗೆ ಲಿಖಿತವಾಗಿ ಕಳುಹಿಸಿ ಕೊಟ್ಟರೆ ಮಾಡಿಕೊಡುತ್ತೇವೆ. ಇನ್ನು ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಇವರ ಕ್ಷೇತ್ರವಾದ ಮದ್ದೂರಿಗೆ 4 ಅಂಗನವಾಡಿ ಕೇಂದ್ರಗಳು ಈಗಾಗಲೇ sanction ಆಗಿದೆ. ಈ ಪೈಕಿ ಎರಡು ಅಂಗನವಾಡಿ ಕೇಂದ್ರಗಳಿಗೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿದೆ. ಉಳಿದ ಎರಡು ಅಂಗನವಾಡಿ ಕೇಂದ್ರಗಳಿಗೆ ಸಂಬಂಧಿಸಿದಂತೆ F.D. ಯಿಂದ clearance ಕೇಳಿದ್ದೇವೆ. ಮಾರ್ಚ್ ಒಳಗಾಗಿ ಇನ್ನು ಎರಡು ಅಂಗನವಾಡಿಗಳನ್ನು ಕೊಡುವಂಥ ಕೆಲಸಕ್ಕೆ ನಾವು ಮುಂದಾಗಿದ್ದೇವೆ.

ಅಧ್ಯಕ್ಷರು:– ಆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮಗಳು

107(808); ಶ್ರೀ ನಾರಾಯಣ ಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೈಗೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಯಾವುವು;

ಆ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ಸ್ಥಳೀಯ ಶಾಸಕರನ್ನು ಸೇರಿಸಿಕೊಳ್ಳಲಾಗಿದೆಯೇ;

ಇ) ಈ ರೀತಿ ಸ್ಥಳೀಯ ಶಾಸಕರ ಗಮನಕ್ಕೆ ತರದೆ ಕಾರ್ಯಕ್ರಮಗಳನ್ನು ಆಯೋಜಿಸಿ, ಸರ್ಕಾರಿ ಹಣವನ್ನು ದುರುಪಯೋಗ ಮಾಡುತ್ತಿರುವುದು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಕಳೆದ 3 ವರ್ಷಗಳಲ್ಲಿ ಬಂಗಾರಪೇಟೆ ತಾಲ್ಲೂಕಿನಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ? (ಪ್ರತ್ಯೇಕವಾಗಿ ಹಣ ಬಳಕೆಯ ವಿವರ ಮತ್ತು ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ಒದಗಿಸುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ)

1. ಸ್ಥಳೀಯ ಪ್ರಾಯೋಜಿತ ಕಾರ್ಯಕ್ರಮ
2. ಸೌರಭ
3. ಯುವ ಸೌರಭ
4. ಚಿಗುರು
5. ಸಂಘ–ಸಂಸ್ಥೆಗಳಿಗೆ ಧನಸಹಾಯ